# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 428/2017

(ಪ್ರಾಸಾ-1 ಚಾಸಾ-3 )

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ದಿಃ17.10.2022.

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರಕಾಶ್, |
| ತಂದೆಯ ಹೆಸರು | - | ಮುನಿಶಾಮಪ್ಪ, |
| ವಯಸ್ಸು | - | 32 ವರ್ಷ, |
| ಉದ್ಯೋಗ | - | ವ್ಯವಸಾಯ, |
| ವಾಸ | - | ಬಿಸನಹಳ್ಳಿ. |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ</u>**

ಚಾಸಾ-1 ಇವರ ಪರಿಚಯ ಇದೆ. ಅವರು ಪರಿಶಿಷ್ಟ ಜಾತಿಯ ಹೊಲೆಯ ಜಾತಿಯವರು. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯ ಪರಿಚಯ ಇದೆ. ಗೈರು ಹಾಜರಿರುವ 2 ನೇ ಆರೋಪಿ ಪೂರ್ಣಿಮ ಅವರ ಪರಿಚಯ ಇದೆ. ಆರೋಪಿತರು ಒಕ್ಕಲಿಗ ಗೌಡ ಜಾತಿಯವರು. ಚಾಸಾ-4 ಮತ್ತು 5 ಇವರ ಪರಿಚಯ ಇದೆ.

2. ಈಗ ಸುಮಾರು 4-5 ವರ್ಷದ ಹಿಂದೆ ಬೆಳಗ್ಗೆ 07.30-08.00 ಘಂಟೆ ಸಮಯದಲ್ಲಿ ನಾನು ನನ್ನ ಮಗುವನ್ನು ಶಾಲೆಗೆ ಬಿಡಲು ನಮ್ಮ ಊರಿನ ಬಸ್ ಸ್ಟ್ಯಾಂಡ್ ಹತ್ತಿರ ಬಂದಿದ್ದೆ. ಬಸ್ ಸ್ಟಾಪ್ ನಲ್ಲಿ ಆರೋಪಿತರು ಮತ್ತು ಲಾವಣ್ಯ ಜಗಳ ಆಡುತ್ತಿದ್ದರು. ನಾನು ಬಸ್ ಸ್ಟ್ಯಾಂಡ್ ಗೆ ಬರುವ ವೇಳೆಗೆ ಜಗಳ ಪ್ರಾರಂಭವಾಗಿತ್ತು. ಆರೋಪಿ ಪೂರ್ಣಿಮ ಈಕೆ ಚಾಸಾ-1 ರವರಿಗೆ ನೀವು ಹೊಲೆಯ ಜಾತಿಯವರು, ಹಾಗೇ ಹೀಗೆ ಎಂದು ಬೈದರು. 1 ನೇ ಆರೋಪಿ ಚಪ್ಪಲಿಯಿಂದ ಚಾಸಾ-1 ಇವರಿಗೆ ಹೊಡೆದರು. ಸದರಿ ಚಪ್ಪಲ್ ಅನ್ನು ನೋಡಿದರೆ ಗುರ್ತಿಸುತ್ತೇನೆ. ಈಗ ತೋರಿಸಿದ ಚಪ್ಪಲ್ ನಿಂದಲೇ ಚಾಸಾ-1 ಇವರಿಗೆ ಹೊಡೆದಿದ್ದಾರೆ. ಸದರಿ ಚಪ್ಪಲ್ ಅನ್ನು ಮು.ಮಾ-1 ಎಂದು ಗುರ್ತಿಸಲಾಯಿತು. ಗಲಾಟೆಯನ್ನು ಮತ್ಯಾರು ನೋಡಿದ್ದಾರೆಂದು ಗೊತ್ತಿಲ್ಲ.

**<u>ಪಾಟೀ ಸವಾಲುಃ</u>** ಶ್ರೀ ಸಿವಿಎನ್ ವಕೀಲರು ತಮ್ಮ ಸೀನಿಯರ್ ವಕೀಲರು ಊರಲ್ಲಿ ಇರುವುದಿಲ್ಲ ಎಂದು ಪಾಟೀ ಸವಾಲಿಗೆ ಸಮಯಕೋರುತ್ತಾರೆ. ಸದರಿ ಕಾರಣ ಸಮಂಜಸವಿಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು